# ಊರಿಗೆ ಬಂದರೆ ದಾಸಯ್ಯ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 90.
2. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 59.
3. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 58.
4. **Note:** Lyrics given without highlights are as per Ref. 1. The wordings in Ref. 2 are similar to Ref. 1. The wordings given in yellow highlights are as per Ref. 3.
5. **Note:** Singer has followed wordings as in Ref. 1.
6. **Note:** Ankita is different in the above books. We have considered Ref. 3 as standard and taken that Ankita for listing.

| | |
|---|---|
| ರಾಗ: ಹಿಂದುಸ್ಥಾನಿ ಕಾಪಿ ತಾಳ: ಆದಿ | ರಾಗ: ಕಾಪಿ ತಾಳ: ಆದಿ |
| ಊರಿಗೆ ಬಂದರೆ ದಾಸಯ್ಯ, ನಮ್ಮ | ಊರಿಗೆ ಬಂದರೆ ದಾಸಯ್ಯ, ನಮ್ಮ |
| ಕೇರಿಗೆ ಬಾ ಕಂಡ್ಯ ದಾಸಯ್ಯ ॥ ಪ ॥ | ಕೇರಿಗೆ ಬಾ ಕಂಡೆ ದಾಸಯ್ಯ |
| ಕೇರಿಗೆ ಬಂದರೆ ದಾಸಯ್ಯ, ಗೊಲ್ಲ | ಕೇರಿಗೆ ಬಂದರೆ ದಾಸಯ್ಯ, ಗೊಲ್ಲ |
| ಕೇರಿಗೆ ಬಾ ಕಂಡ್ಯ ದಾಸಯ್ಯ ॥ ಅಪ ॥ | ಕೇರಿಗೆ ಬಾ ಕಂಡೆ ದಾಸಯ್ಯ |
| ಕೊರಳೊಳು ವನಮಾಲೆ ಧರಿಸಿದನೆ, ಕಿರಿ- | ಕೊರಳೊಳು ವನಮಾಲೆ ಧರಿಸಿದನೆ, ಕಿರು |
| ಬೆರಳಲಿ ಬೆಟ್ಟವನೆತ್ತಿದನೆ | ಬೆರಳಲಿ ಗಿರಿಯನೆತ್ತಿದನೆ |
| ಇರುಳು ಹಗಲು ನಿನ್ನ ಕಾಣದೆ ಇರಲಾರೆ | ಇರುಳು ಹಗಲು ಇಲ್ಲದಲಿ ಹಿರಣ್ಯನ |
| ಮರುಳು ಮಾಡಿದಂಥ ದಾಸಯ್ಯ ॥ 1 ॥ | ಮರಣವ ಮಾಡಿದ ದಾಸಯ್ಯ |
| ಕಪ್ಪು ವರ್ಣದ ದಾಸಯ್ಯ, ಕಂ- | ಮುಂಗೈ ಮುರಾರಿ ದಾಸಯ್ಯ, ಚೆಲುವ |
| ದರ್ಪನ ಪಿತನೆಂಬೊ ದಾಸಯ್ಯ | ಪೊಂಗೊಳಲೂದುವ ದಾಸಯ್ಯ |
| ಅಪ್ಪಿಕೊಂಡು ನಮ್ಮ ಮನಸಿಗೆ ಬಂದರೆ | ಹಾಂಗೆ ಹೋಗದಿರು ದಾಸಯ್ಯ, ಹೊ- |
| ಅಪ್ಪವ ಕೊಡುವೆನು ದಾಸಯ್ಯ ॥ 2 ॥ | ನ್ನುಂಗುರ ಕೊಡುವೆನು ದಾಸಯ್ಯ |
| ಮುಂದೇನು ದಾರಿ ದಾಸಯ್ಯ, ಚೆಲ್ವ | ಕಪ್ಪು ವರ್ಣದ ದಾಸಯ್ಯ, ಕಂ- |
| ಪೊಂಗೊಳಲೂದುವ ದಾಸಯ್ಯ | ದರ್ಪನ ಪಿತನೆಂಬ ದಾಸಯ್ಯ |

ಹಾಂಗೆ ಪೋಗದಿರು ದಾಸಯ್ಯ, ಹೊ-
ನ್ನುಂಗುರ ಕೊಡುವೆನು ದಾಸಯ್ಯ ॥ 3 ॥

ಒಪ್ಪಿಕೊಂಡು ಎನ್ನ ಮನೆಗೆ ಬಂದರೆ, ತೋಳ್
ಕುಪ್ಪಸ ಕೊಡುವೆನು ದಾಸಯ್ಯ

ಸಣ್ಣ ನಾಮದ ದಾಸಯ್ಯ, ನಮ್ಮ
ಸದನಕೆ ಬಾ ಕಂಡ್ಯ ದಾಸಯ್ಯ
ಸದನಕೆ ಬಂದರೆ ದಾಸಯ್ಯ, ಮಣಿ-
ಸರವನು ಕೊಡುವೆನು ದಾಸಯ್ಯ ॥ 4 ॥

ಶಾಲು ಹೊದಿಸುವೆನು ದಾಸಯ್ಯ, ತುತ್ತು
ಹಾಲು-ಬೋನವುಣಿಸುವೆ ದಾಸಯ್ಯ
ಕಾಲಿಗೆ ಬಿದ್ದೆನು ದಾಸಯ್ಯ, ವನ-
ಮಾಲೆಯ ಕೊಡುವೆನು ದಾಸಯ್ಯ

ಸಿಟ್ಟು ಮಾಡದಿರು ದಾಸಯ್ಯ, ಸಿರಿ-
ಪುರಂದರ ವಿಠ್ಠಲ ದಾಸಯ್ಯ
ರಟ್ಟು ಮಾಡದಿರು ದಾಸಯ್ಯ, ತಂ-
ಬಿಟ್ಟು ಕೊಡುವೆನು ದಾಸಯ್ಯ ॥ 5 ॥

ಸಿಟ್ಟು ಮಾಡಬೇಡ ದಾಸಯ್ಯ, ತಾಳು
ರೊಟ್ಟಿ ಸುಡುವನಕ ದಾಸಯ್ಯ, ತಂ-
ಬಿಟ್ಟನಾದರು ಮೆಲ್ಲೊ ದಾಸಯ್ಯ, ಪುರಂದರ
ವಿಠ್ಠಲನೆಂಬ ದಾಸಯ್ಯ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಗೋಪ ಸ್ತ್ರೀಯರು ಬಾಲಕೃಷ್ಣನನ್ನು ದಾಸಯ್ಯನೆಂದು ಭಾವಿಸಿ, ವಿನೋದದಿಂದ ಆತನನ್ನು ತಮ್ಮ ಕೇರಿಗೆ ಬಾ ಎಂದು ಕರೆಯುತ್ತಾರೆ.

**ಇರುಳು ..... ಮರಣವ ಮಾಡಿದ : -** ಹಿರಣ್ಯಕಷಿಪು ಬ್ರಹ್ಮನನ್ನು ಕುರಿತು ತಪಸ್ಸು ಮಾಡಿ ತನಗೆ ಹಗಲಿನಲ್ಲಿಯೂ ಇರುಳಿನಲ್ಲಿಯೂ ಮರಣ ಬರಬಾರದೆಂದು ವರ ಪಡೆದಿರುತ್ತಾನೆ. ನರಸಿಂಹಾವತಾರಿಯಾದ ಶ್ರೀಹರಿ ಅವನನ್ನು ಸಂಜೆಯಲ್ಲಿ ಕೊಂದನು.

**ಬೆರಳಲಿ ಬೆಟ್ಟವನೆತ್ತಿದ** – ಗೋವರ್ಧನೋದ್ಧರಣ ಪ್ರಸಂಗ.

**ಅಪ್ಪವ** – ಒಂದು ಭಕ್ಷ್ಯ, ಎರೆಯಪ್ಪ.

**ರಟ್ಟು ಮಾಡದಿರು** – ನನ್ನನ್ನು ಹೊರಗೆ ಹಾಕದಿರು.

**Classification:** Keerthane
**Ankita:** purandara vittala
**Location:** NA
**Category:** binnaha, Krishna leele
**Sub-Category:** ooru, keri, parvata, irulu, hagalu, kappu, mana, dari, kolalu, ungura, sittu, asura,
**Pravachana:** NA
**Explanation:** NA